ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/06/2016-17. ದಿನಾಂಕ:03-10-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ತಿಪ್ಪೇಸ್ವಾಮಿ ಜೀರಗಂಡಿ ತಂದೆ ಜಿರಗಂಡಿ ಮೂಗಪ್ಪ<br>2)ಚಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ<br>3)ದೇವೇಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ<br>4)ನೀಲಪ್ಪ ತಂದೆ ಸಣ್ಣ ಮೂಗಪ್ಪ<br>5)ಜೀರಗಂಡಿ ಮೂಗಪ್ಪ ತಂದೆ ತಿಮ್ಮಪ್ಪ<br>ರಾಂಪುರ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 433ಎ/1. 433ಡಿ. 433ಇ. 440ಎ. 441ಎ. 499ಬಿ. 569. ವಿಸ್ತೀರ್ಣ 7-50. 0-95. 0-69. 0-29. 0-75. 0-66. 0-16. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 433ಎ/1. 433ಡಿ. 433ಇ. 440ಎ. 441ಎ. 499ಬಿ. 569. ವಿಸ್ತೀರ್ಣ 7-50. 0-95. 0-69. 0-29. 0-75. 0-66. 0-16. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಜೀರಗಂಡಿ ಮೂಗಪ್ಪ ತಂದೆ ತಿಮ್ಮಪ್ಪ ಇವರು ದಿನಾಂಕ 05-01-2016 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಂಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 27-02-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಪಹಣಿ ದಾಖಲೆಗೂ ವಂಶವೃಕ್ಷಕ್ಕೂ ಹಾಗೂ ನಮೂನೆ-21ಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 39/2015-16. ದಿನಾಂಕ 28-03-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 16-05-2016. ರಿಂದ 03-10-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗು ನಾಲ್ಕನೇ ಅರ್ಜಿದಾರರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ರಾಂಪುರ ಗ್ರಾಮದ ಸನಂ 433ಎ/1. 433ಡಿ. 433ಇ. 440ಎ. 441ಎ. 499ಬಿ. 569. ವಿಸ್ತೀರ್ಣ 7-50. 0-95. 0-69. 0-29. 0-75. 0-66. 0-16. ಎಕ್ರೆ ಜಮೀನುಗಳು ನಮ್ಮ ತಂದೆಯವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಸದರಿ ಜಮೀನುಗಳನ್ನು ಸಾಕ್ಷ್ಯದಾರರ ಸಮಕ್ಷಮ ನಮ್ಮ ನಮ್ಮ ಹಿಸ್ಯಾಕ್ಕೆ ಬಂದ ಜಮೀನುಗಳನ್ನು ದಿನಾಂಕ 05-01-2016 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಅದರಂತೆ ನಾವುಗಳು ಸದರಿ ಜಮೀನುಗಳನ್ನು ಅಳತೆ ಮಾಡಿಸಿ 11ಇ. ನಕ್ಷೆಯನ್ನು ಪಡೆದಿರುತ್ತೇವೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೆಯಂತೆ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ನಾಲ್ಕನೇ ಅರ್ಜಿದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳ ಪೈಕಿ. ಸನಂ 441ಎ. ವಿಸ್ತೀರ್ಣ 0-75. ಸೆಂಟ್ಸು ಜಮೀನು ಜೀರಗಂಡಿ ಮೂಗಪ್ಪ ತಂದೆ ತಿಮ್ಮಪ್ಪ. ನೀಲಪ್ಪ ತಂದೆ ಸಣ್ಣ ಮೂಗಪ್ಪ. ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇದ್ದು ಸದರಿ

ಪು.ತಿ.ನೋ-2.

ಜಮೀನಿನಲ್ಲಿ ಇಬ್ಬರಿಗೂ ಸಮಭಾಗವಿದ್ದು ಸದರಿ ಜಮೀನಿನ ಪಹಣಿಯಲ್ಲಿ ಪ್ರತ್ಯೇಕ ವಿಸ್ತೀರ್ಣ ವಿಭಜನೆ ಆಗುವವರೆಗೂ ಈ ಜಮೀನಿನಲ್ಲಿ ಯಾವುದೇ ಹಕ್ಕು ಬದಲಾವಣೆ ಮಾಡಬಾರದೆಂದು ತಿಳಿಸಿರುತ್ತಾರೆ. ಹಾಗೂ ಸದರಿ ಪಟ್ಟಾದಾರರಾದ ಮೂಗಪ್ಪ ತಂದೆ ತಿಮ್ಮಪ್ಪ ಹಾಗೂ ನೀಲಪ್ಪ ತಂದೆ ಸಣ್ಣ ಮೂಗಪ್ಪ. ಇವರು ಸಂಬಂದಿಕರಾಗಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ 03-10-2016 ರ ವಿಚಾರಣೆಯಲ್ಲಿ ನಾಲ್ಕನೇ ಅರ್ಜಿದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸನಂ 441ಎ. ವಿಸ್ತೀರ್ಣ 0-75. ಸೆಂಟ್ಸು ಜಮೀನನ್ನು ಹೊರತು ಪಡಿಸಿ ಇನ್ನು ಉಳಿದ ಜಮೀನುಗಳನ್ನು ಅರ್ಜಿದಾರರ ಕೋರಿಕೆಯನ್ವಯ ಹಕ್ಕು ಬದಲಾವಣೆ ಮಾಡಲು ನಮ್ಮ ಯಾವ ಆಕ್ಷೇಪಣೆಗಳು ಇಲ್ಲವೆಂದು ಹೇಳಿಕೆ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ನಾಲ್ಕನೇ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಸನಂ ಪೈಕಿ. ಸನಂ 441ಎ. ವಿಸ್ತೀರ್ಣ 0-75. ಸೆಂಟ್ಸು ಜಮೀನನ್ನು ಹೊರತು ಪಡಿಸಿ ಇನ್ನು ಉಳಿದ ಜಮೀನುಗಳನ್ನು ಅರ್ಜಿದಾರರ ಕೋರಿಕೆಯಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 433ಎ/1. 433ಡಿ. 433ಇ. 440ಎ. 499ಬಿ. 569. ವಿಸ್ತೀರ್ಣ 7-50. 0-95. 0-69. 0-29. 0-66. 0-16. ಎಕ್ರೆ ಜಮೀನುಗಳನ್ನು ದಿನಾಂಕ 05-01-2016 ರ ಪಾಲು ವಿಭಾಗದ ಪತ್ರ ಪ್ರಕಾರ 11ಇ. ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | ತಿಪ್ಪೇಸ್ವಾಮಿ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ.<br>ಚಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ.<br>ದೇವೇಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ. | 433ಎ/1. | 7-50. |
| 2 | ದೇವೇಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ. | 433ಡಿ.<br>569. | 0-95.<br>0-16. |
| 3 | ತಿಪ್ಪೇಸ್ವಾಮಿ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ. | 433ಇ.<br>440ಎ.<br>499ಬಿಪೈಕಿ. | 0-69<br>0-29.<br>0-16. |
| 4 | ಚಂದ್ರಪ್ಪ ಜೀರಗಂಡಿ ತಂದೆ ಜೀರಗಂಡಿ ಮೂಗಪ್ಪ. | 499ಬಿಪೈಕಿ. | 0-50. |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲೂ ಸಹಾ ಆದೇಶಿಸಲಾಗಿದೆ. ಸನಂ 441ಎ. ವಿಸ್ತೀರ್ಣ 0-75 ಸೆಂಟ್ಸು ಜಮೀನನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 03-10-2016. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ಉಪತಹಶೀಲ್ದಾರರು
ನಾಡಕಾರ್ಯಾಲಯ
ನಾಡಕಛೇರಿ, ಕೊಟ್ಟೂರು
ಕೊಟ್ಟೂರು
ಮು.ತ.ನೋ-3.

ನಾಡ ಕಾರ್ಯಾಲಯ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಮೂಗಪ್ಪ ಜೀರಗಂಡಿ ತಂದೆ ತಿಮ್ಮಪ್ಪ. ನೀಲಪ್ಪ ತಂದೆ ಸಣ್ಣ ಮೂಗಪ್ಪ. ಹಾಗೂ ಇತರರು ರಾಂಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ರಮೇಶ ಆರ್. ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.